ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಮೈಸೂರು ಕಾಗದ ಕಾರ್ಖಾನೆಯ ಕಾರ್ಮಿಕರ ಬಗ್ಗೆ

4416 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಕಾಗದ ಕಾರ್ಖಾನೆ ಅರಣ್ಯ ಕಾರ್ಯಕಾರಿ ಸಂಘವು ಕಾರ್ಮಿಕರನ್ನು ಖಾಯಂಗೊಳಿಸಲು ಬೇಡಿಕೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಕಾನೂನಿನಂತೆ ಅರ್ಹತೆ ಇದ್ದಾಗ್ಯೂ ಮೇಲ್ಕಂಡ ಕಾರ್ಮಿಕರನ್ನು ಖಾಯಂಗೊಳಿಸದಿರಲು ಕಾರಣವೇನು?

ಇ) ಹತ್ತು ವರ್ಷಗಳಿಗೂ ಮೇಲ್ಪಟ್ಟು ಕೆಲಸ ಮಾಡುತ್ತಿರುವ ಎಂ.ಪಿ.ಎಂ. ಅರಣ್ಯ ವಿಭಾಗದ ನೌಕರರ ಸಂಖ್ಯೆ ಎಷ್ಟು? ಮತ್ತು ಎಂದಿನಿಂದ ಇವರನ್ನು ಖಾಯಂ ಮಾಡಲಾಗುವುದು?

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ಹೌದು.

ಆ) ಎಂ.ಪಿ.ಎಂ. ಸಂಸ್ಥೆಯು ಜಾಗತಿಕ ಮಾರುಕಟ್ಟೆಯನ್ನು ಎದುರಿಸಬೇಕಾಗಿರುವ ಈಗಿನ ಕೈಗಾರಿಕಾ ಪರಿಸ್ಥಿತಿಯನ್ನು ಹಾಗೂ ಸಂಸ್ಥೆಯ ಆರ್ಥಿಕ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡಲ್ಲಿ, ಕಾರ್ಮಿಕರ ಸೇವೆಯನ್ನು ಖಾಯಂಗೊಳಿಸುವ ಬೇಡಿಕೆಯನ್ನು ಈಡೇರಿಸಲು ಸಾಧ್ಯವಿಲ್ಲ.

ಇ) ಹತ್ತು ವರ್ಷಗಳಿಗೂ ಮೇಲ್ಪಟ್ಟು ಕೆಲಸ ಮಾಡುತ್ತಿರುವ ಎಂ.ಪಿ.ಎಂ. ಅರಣ್ಯ ವಿಭಾಗದ ನೌಕರರ ಸಂಖ್ಯೆ ಸುಮಾರು 283ರಷ್ಟು ಇರುತ್ತದೆ. ಪ್ರಶ್ನೆ (ಆಗೆ ಕೊಟ್ಟ ಉತ್ತರವು ಈ ಪ್ರಶ್ನೆಗೆ ಸಮಂಜಸವಾಗಿದೆ)

ಅನ್ನಪೂರ್ಣ ಯೋಜನೆ

4417 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ 'ಅನ್ನಪೂರ್ಣ' ಯೋಜನೆ ಎಂದಿನಿಂದ ಜಾರಿಗೆ ಬಂದಿದೆ?

ಆ) ರಾಜ್ಯದಲ್ಲಿ ಇದುವರೆಗೂ ಈ ಯೋಜನೆಗೆ ಗುರುತಿಸಲಾದ ಫಲಾನುಭವಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು).

ಇ) ಈ ಯೋಜನೆಯನ್ನು ಪಡೆದುಕೊಳ್ಳಲು ಇರಬೇಕಾದ ಅರ್ಹತೆಗಳೇನು?